**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು**

**SC No: 154/2019**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಮರಿಯಾ ಜೋಬಿ | ಪಿಡಬ್ಲೂ - 2 |
| ತಂದೆಯ ಹೆಸರು | - | ಜೋಬಿ ಜೋಸ್ | ಸಿಡಬ್ಲೂ - 2 |
| ವಯಸ್ಸು | - | 8 ವರ್ಷ | |
| ವಿದ್ಯಾಭ್ಯಾಸ | - | 3 ನೇ ತರಗತಿ ಪರೀಕ್ಷೆ ಬರೆಯಲಾಗಿದೆ | |
| ವಾಸ ಸ್ಥಳ | - | ಎರ್ನಾಕುಲಂ, ಕೇರಳ | |

(ಸಾಕ್ಷಿಗೆ ಕನ್ನಡ ಭಾಷೆ ಬರದ ಕಾರಣ ಶ್ರೀಮತಿ ಎ ಕೆ ವೈ ವಕೀಲರಿಂದ ಸಾಕ್ಷಿ ಮಲಯಾಳಂ ಭಾಷೆಯಲ್ಲಿ ಹೇಳಿದ್ದನ್ನು ಕನ್ನಡಕ್ಕೆ ತರ್ಜುಮೆ ಮಾಡಿಸಲಾಯಿತು ಮತ್ತು ತರ್ಜುಮೆ ಮಾಡಿಸುವ ಮೊದಲು ಶ್ರೀಮತಿ ಎ ಕೆ ವೈ ವಕೀಲರಿಗೆ ಪ್ರಮಾಣ ವಚನ ಭೋಧಿಸಲಾಯಿತು.)

ಸಾಕ್ಷಿಯು ಬಾಲಸಾಕ್ಷಿಯಾಗಿರುವ ಕಾರಣ ಔಪಚಾರಿಕವಾಗಿ ಕೆಲ ಸಾಮಾನ್ಯ ಪ್ರಶ್ನೆಗಳನ್ನು ಕೇಳಲಾಯಿತು.

ನ್ಯಾಯಾಲಯದಲ್ಲಿ ಸಾಕ್ಷಿ ನೀಡಲು ಬಂದಿದ್ದ ಸಮವಸ್ತ್ರದಲ್ಲಿದ್ದ ಪೊಲೀಸರನ್ನು ಸಾಕ್ಷಿಗೆ ತೋರಿಸಿ ಅವರು ಯಾರು ಎಂದರೆ ಸಾಕ್ಷಿ ಪೊಲೀಸ್ ಎನ್ನುತ್ತಾರೆ.

ಪ್ರಶ್ನೆಃ ಸಾಕ್ಷಿಯು ಈ ದಿನ ಗುಲಾಬಿ ಬಣ್ಣದ ಫ್ರಾಕನ್ನು ಧರಿಸಿದ್ದು ಸದರಿ ಫ್ರಾಕಿನ ಬಣ್ಣ ಏನು?
ಉಃ ಗುಲಾಬಿ ಬಣ್ಣ.

ಪ್ರಶ್ನೆಃ ನಿಮ್ಮ ಹುಟ್ಟಿದ ಹಬ್ಬವನ್ನು ಯಾವ ದಿನಾಂಕದಂದು ಆಚರಿಸಿಕೊಳ್ಳುತ್ತೀರಿ?
ಉಃ ಜೂನ್ 8.

ಪ್ರಶ್ನೆಃ ಕ್ರಿಸ್ ಮಸ್ ಹಬ್ಬವನ್ನು ಯಾವ ದಿನದಂದು ಆಚರಿಸುತ್ತೀರಿ?
ಉಃ ಗೊತ್ತಿಲ್ಲ.

ಪ್ರಶ್ನೆಃ ಈ ದಿನ ನೀನು ಎಲ್ಲಿಗೆ ಬಂದಿರುವೆ?
ಉಃ ಕೋರ್ಟ್ ಗೆ ಬಂದಿದ್ದೀನಿ.

ಪ್ರಶ್ನೆಃ ಏತಕ್ಕಾಗಿ ನ್ಯಾಯಾಲಯಕ್ಕೆ ಬಂದಿರುವಿರಿ?
ಉಃ ಕೇಸು ಇದೆ ಹಾಗಾಗಿ ಬಂದಿದ್ದೇನೆ.

(ಸಾಕ್ಷಿಯು ಈ ಮೇಲಿನ ಪ್ರಶ್ನೆಗಳನ್ನು ಅರ್ಥ ಮಾಡಿಕೊಂಡು ಅವುಗಳಿಗೆ ಸಮರ್ಪಕವಾಗಿ ಉತ್ತರಗಳನ್ನು ನೀಡಿದ್ದರಿಂದ ಸಾಕ್ಷಿ ಪ್ರಶ್ನೆಗಳಿಗೆ ಸಮರ್ಪಕವಾಗಿ ಉತ್ತರಿಸಬಲ್ಲರೆಂದು ನ್ಯಾಯಾಲಯ ಖಾತ್ರಿ ಪಡಿಸಿಕೊಂಡು ಸಾಕ್ಷಿಯಮುಖ್ಯ ವಿಚಾರಣೆ ನಡೆಸಲು ಸಾರ್ವಜನಿಕ ಅಭಿಯೋಜಕರಿಗೆ ಅನುಮತಿ ನೀಡಲಾಯಿತು)

ವಿಚಾರಣೆಗೊಳಪಡಿಸಿದ ದಿನಾಂಕಃ **01-04-2023**

<u>ಮುಖ್ಯ ವಿಚಾರಣೆ : ಸಾರ್ವಜನಿಕ ಅಭಿಯೋಜಕರಿಂದಃ</u>

1. ನ್ಯಾಯಾಲಯದಲ್ಲಿ ಹಾಜರಿರುವಆರೋಪಿತರನ್ನು ತೋರಿಸಿ ಅವರು ಯಾರು ಎಂದು ಕೇಳಲಾಗಿ ಸಾಕ್ಷಿ 1 ನೇ ಆರೋಪಿ ನನ್ನ ತಾಯಿ, 2 ನೇ ಆರೋಪಿ ನನ್ನ ತಂದೆ ಎನ್ನುತ್ತಾರೆ. ನನಗೆ ಒಬ್ಬ ಅಣ್ಣನಿದ್ದಾನೆ. ಚಾಸಾ.1 ಸೈಯ್ಯದ್ ಸಫೀರ್ ಅಹಮದ್‌ಗೊತ್ತು. ಫ್ರಾಸಾ.1 ಫೌಲೋಸ್ ಗೊತ್ತಿಲ್ಲ. ಮುತ್ತಿನಕೊಪ್ಪದಲ್ಲಿ ನಮ್ಮ ಹೋಟೆಲ್ ಇತ್ತು. ಅದನ್ನು ನನ್ನ ಪಪ್ಪ ನೋಡಿಕೊಳ್ಳುತ್ತಿದ್ದರು. ನಾನು ಯು ಕೆ ಜಿ ಓದುತ್ತಿದ್ದೆನು. ಆಗ ಒಂದು ದಿನ ನಾನು ಸ್ಕೂಲ್ ನಿಂದ ಮನೆಗೆ ಬಂದೆನು. ಆಗ ನನ್ನ ಅಮ್ಮ ನನಗೆ ಊಟವನ್ನು ಹಾಕಿಕೊಟ್ಟರು. ಆಗ ನಾನು ಊಟವನ್ನು ಮಾಡಿ ನಂತರ ಡ್ರೆಸ್ ಚೇಂಜ್ ಮಾಡುತ್ತಿದ್ದೆನು ಅಷ್ಟರಲ್ಲಿ ಅಂಗಳಕ್ಕೆ ಸಫೀರ್ ಅಂಕಲ್ ಬಂದು ನನ್ನ ಅಮ್ಮನ ಜೊತೆ ಜಗಳ ಮಾಡುತ್ತಿದ್ದರು. ಸಫೀರ್ ಅಂಕಲ್ ಕೈಯಲ್ಲಿ ಕತ್ತಿ ಇತ್ತು. ಸಫೀರ್ ಅಂಕಲ್ ನನ್ನನ್ನು ಮತ್ತು ನನ್ನ ಅಮ್ಮನನ್ನು ತಳ್ಳಿದರು. ಆಗ ಸಫೀರ್ ಅಂಕಲ್ ಕೈಯಲ್ಲಿದ್ದ ಕತ್ತಿ ನನ್ನ ಕುತ್ತಿಗೆಗೆ ಟಚ್ ಆಗಿ ಗಾಯವಾಯಿತು. ಆಗ ಅಲ್ಲಿ ತುಂಬಾ ಜನ ಅಣ್ಣಂದಿರು ಹೋಟೆಲ್ ಹತ್ತಿರ ಇದ್ದರು. ಅವರಲ್ಲಿ ಒಬ್ಬರು ನನ್ನನ್ನು ಆಸ್ಪತ್ರೆಗೆ ಕರೆಸಿಕೊಂಡು ಹೋಗಿ ಸ್ಟಿಚ್ ಹಾಕಿಸಿದರು.

2. ನಮ್ಮ ಮನೆಯಿಂದ ನಮ್ಮ ಹೋಟೆಲ್ ಕಾಣಿಸುತ್ತಿತ್ತು. ಗಲಾಟೆಯಲ್ಲಿ ನನ್ನ ಪಪ್ಪನ ಬಲಕೈಗೆ ಪೆಟ್ಟಾಗಿತ್ತು ಹಾಗಾಗಿ ಅವರು ಆಸ್ಪತ್ರೆಗೆ ಹೋಗಿದ್ದರು. ಆ ದಿನ ನನ್ನ ಪಪ್ಪ ಮತ್ತು ಅಮ್ಮನಿಂದ ನನಗೆ ಯಾವುದೇ ತೊಂದರೆಯಾಗಿಲ್ಲ.

(ಈ ಹಂತದಲ್ಲಿ ಸಾರ್ವಜನಿಕ ಅಭಿಯೋಜಕರ ವಿನಂತಿಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸಾರ್ವಜನಿಕ ಅಭಿಯೋಜಕರಿಂದಃ</u>

3. ನಿಮ್ಮ ತಾಯಿ ಮತ್ತು ಚಾಸಾ.1 ಸೈಯ್ಯದ್ ಸಫೀರ್ ಅಹಮದ್ ರವರ ನಡುವೆ ನಿಮ್ಮ ಹೋಟೆಲ್ ನ ಪಕ್ಕದಲ್ಲಿದ್ದ ಸೈಟಿನ ವಿಚಾರದಲ್ಲಿ ಆ ದಿನ ಗಲಾಟೆಯಾಗುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ಆಗ ನಿಮ್ಮ ತಾಯಿ ನಿಮ್ಮ ಹೋಟೆಲ್ ಒಳಗೆ ಹೋಗಿ ನಿಮ್ಮನ್ನು ಕರೆದುಕೊಂಡು ಒಂದು ಕೈಯ್ಯಲ್ಲಿ ಚಾಕುವನ್ನು ತೆಗೆದುಕೊಂಡು ಹೊರಗೆ ಬಂದರು ಎಂದರೆ ಸಾಕ್ಷಿ ನಾನೇ ನನ್ನ ತಾಯಿಯ ಬಳಿ ಹೋದೆನು ಎನ್ನುತ್ತಾರೆ. ಆಗ ನಿಮ್ಮ ತಾಯಿಯಾದ 1 ನೇ ಆರೋಪಿ ಚಾಸಾ.1 ರವರನ್ನು ಕುರಿತು ನಿಮ್ಮನ್ನು ಇಷ್ಟಕ್ಕೆ ಬಿಡುವುದಿಲ್ಲ ನಾನು ನನ್ನ ಮಕ್ಕಳೊಂದಿಗೆ ಸಾಯುತ್ತೇನೆ ಎಂದು ಹೇಳಿದರು ಎಂದರೆ ನನಗೆ ನೆನಪಿಲ್ಲ. ಆ ರೀತಿ ಹೇಳಿ ನಿಮ್ಮ ತಾಯಿ ಚಾಕುವಿನಿಂದ ನಿಮ್ಮ ಕುತ್ತಿಗೆಯನ್ನು ಕುಯ್ದು ರಕ್ತಗಾಯ ಮಾಡಿದರು ಎಂದರೆ ಸರಿಯಲ್ಲ. ನಂತರ ನಿಮ್ಮ ತಾಯಿ ಸಹ ಚಾಕುವಿನಿಂದ ತನ್ನ ಎಡಗೈಯನ್ನು ಕುಯ್ದುಕೊಳ್ಳಲು ಹೋದಾಗ ಪೊಲೀಸರು ಮತ್ತು ಅಲ್ಲಿ ಸೇರಿದ್ದ ಜನರು ಆಕೆಯನ್ನು ತಡೆದರು ಎಂದರೆ ನನಗೆ ಗೊತ್ತಿಲ್ಲ. ನಿಮ್ಮ ತಾಯಿಯೇ ನಿಮ್ಮ ಕುತ್ತಿಗೆಯನ್ನು ಕುಯ್ದು ರಕ್ತಗಾಯ

ಮಾಡಿದ್ದರೂ ಸಹ ನಿಮ್ಮ ತಾಯಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟೀ ಸವಾಲು: ಆರೋಪಿತರ ಪರ ವಕೀಲರು ಸಾಕ್ಷಿಯ ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/-

(ಭಾನುಮತಿ ಬಿ.ಸಿ.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.